# ಪ್ರಧಾನ ಸಿವಿಲ್ ಜಡ್ಜ್ ವ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611-2013**

ಸಿ.ಡಬ್ಲೂಃ 1

ಪಿ.ಡಬ್ಲೂಃ3

ಸಾಕ್ಷಿದಾರರ ಹೆಸರು : ಚಂದ್ರಕಲಾ ಸದಾನಂದ ಅಗರವಾಡೇಕರ್

ತಂದೆಯಃಗಂಡನ ಹೆಸರು : ಸದಾನಂದ

ವಯಸ್ಸು : 47 ವರ್ಷ

ಉದ್ಯೋಗ : ಸ್ನೇಹಕೂಂಜ ಕಾರ್ಯಕರ್ತೆ

ವಾಸ್ತವ್ಯ : ನಾಗದೇವಿರೋಡ್, ತಾಃಕುಮಟಾ

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋದಿಸಲಾಯಿತು. ದಿನಾಂಕಃ 16-12-2015.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ ಃ -

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ನನಗೆ ಇದೆ. ತಾಲೂಕು ಪಂಚಾಯತ ಬಳಿ 1 ನೇ ಆರೋಪಿತಳು ಎನ್ ಟಿ ಸಿ ಕಾಲೇಜನ್ನು ನಡೆಸುತ್ತಿದ್ದಳು. ನಾವು ಅವರ ಕಾಲೇಜಿನಲ್ಲಿ ನಮ್ಮ ಸ್ನೇಹಕೂಂಜದವತಿಯಿಂದ ವಿದಾರ್ಥಿಗಳಲ್ಲಿ ಎಡ್ಸ್‌ರೋಗದ ಬಗ್ಗೆ ಜಾಗ್ರುತಿಮೂಡಿಸುವ ಕಾರ್ಯಕ್ರಮ ಇಟ್ಟುಕೊಂಡಿದ್ದೆವು ಆ ಪ್ರಕಾರ 1 ನೇ ಆರೋಪಿತಳ ಪರಿಚಯವಾಗಿರುತ್ತದೆ. ತದನಂತರದಲ್ಲಿ 1 ನೇ ಆರೋಪಿತಳು ನನ್ನನ್ನು ಫೋನನಲ್ಲಿ ಆಗ್ಗಿದ್ದಾಗೆ ಸಂಪರ್ಕಿಸುತ್ತಿದ್ದಳು ಮತ್ತು ತಾನು ಉದ್ಯೋಗಿಗಳಿಗೆ ಉದ್ಯೋಗವನ್ನು ತೆಗೆಸಿಕೊಡುತ್ತೇನೆ ಮತ್ತು ಆಕಾಂಕ್ಷಿಗಳು ಇದ್ದಲ್ಲಿ ಆಕೆಯನ್ನು ಸಂಪರ್ಕಿಸುವಂತೆ ಹೇಳುತ್ತಿದ್ದಳು. ಅದಲ್ಲದೇ ನಮ್ಮ ಮನೆಗೆ ಬಂದು ನನ್ನನ್ನು ಬೇಟಿಯಾಗಿರುತ್ತಿದ್ದಳು ಆ ಸಂದರ್ಭದಲ್ಲಿ ಕೂಡಾ ಮೇಲೆ ಹೇಳಿದ ವಿಚಾರದ ಬಗ್ಗೆ ನನ್ನಲ್ಲಿ ಮಾತನಾಡುತ್ತಿದ್ದಳು. ಯಮುನಾ ನಾಗಪ್ಪ ಗಾವಡಿ ನನ್ನ ತಂಗಿಯಾಗಿದ್ದು ಆಕೆಯು ಬಿ ಎ ಪದವಿಯನು ಪೂರ್ಣಗೊಳಿಸಿದ್ದು ಎಫ್ ಡಿ ಎ ಪರೀಕ್ಷೆಗೆ ಕುಳಿತುಕೊಂಡಿದ್ದಳು. ನನ್ನ ತಂಗಿಗೆ ಕೆಲಸವನ್ನು ಕೊಡಿಸುತ್ತೇನೆ ಎಂಬ ಭರವಸೆಯನ್ನು 1 ನೇ ಆರೋಪಿತಳು ನೀಡಿದ್ದು ಅದರ ಬಾಬ್ತು 3 ವರೆ ಲಕ್ಷ ಖರ್ಚು ತಗಲುತ್ತದೆ ಮತ್ತು ಅಷ್ಟು ಹಣವನ್ನು ನೀಡುವಂತೆ ನಮ್ಮಲ್ಲಿ ಹೇಳಿದ್ದಳು. ಅದರ ಬಾಬ್ತು 1 ಲಕ್ಷ ಹಣವನ್ನು ಮುಂಗಡವಾಗಿ ಪಾವತಿಸಬೇಕಾಗುತ್ತದೆ ಎಂದು ಕೂಡಾ ಹೇಳಿದ್ದಳು. ಅದರ ಬಾಬ್ತು ನಾನು ದಿಃ 9-1-2009 ರಂದು ಸಿಂಡಿಕೇಟ್ ಬ್ಯಾಂಕ್ ಕುಮಟಾ ಶಾಖೆಯ ಚೆಕ್ ಮೂಲಕ 25 ಸಾವಿರ ರೂ. ಅನ್ನು ನಾನು ಪಾವತಿಸಿರುತ್ತೇನೆ. ಆ ಚೆಕ್ ನಂ. 413610 ಆಗಿರುತ್ತದೆ. ಮುಂದಿನ ಹಣಕ್ಕಾಗಿ ನನ್ನ ತಾಯಿಯ ಬಳೆಯನ್ನು ತಂದೆಯವರ ಹೆಸರಿನಲ್ಲಿ ಆಧಾರವಾಗಿ ಇಟ್ಟುಕೊಂಡು ಹಣವನ್ನು ಪಡೆದು ಅದಲ್ಲದೇ ನಮ್ಮಲ್ಲಿ ಇದ್ದಂತಹ ಹಣವನ್ನು ಸೇರಿಸಿ 35 ಸಾವಿರ ವನ್ನು 1 ನೇ ಆರೋಪಿತಳಿಗೆ ನೀಡಿದ್ದು ಅದಲ್ಲದೇ ನನ್ನ ತಮ್ಮ ಚಿಕ್ಕ ಮೂಲಕ ರೂ. 25 ಸಾವಿರವನ್ನು 1 ನೇ ಆರೋಪಿತಳಿಗೆ ಪಾವತಿಮಾಡಿದ್ದು

ಆ ಪ್ರಕಾರ ಒಟ್ಟೂ 85 ಸಾವಿರ ಹಣವನ್ನು ಉದ್ಯೋಗ ಕೊಡಿಸುವ ಸಲುವಾಗಿ 1 ನೇ ಆರೋಪಿತಳಿಗೆ ನೀಡಿದ್ದೆವು. ಹಣಹಿಡಿದುಕೊಂಡು ಹೋಗಲು 1 ನೇ ಆರೋಪಿತಳೊಂದಿಗೆ 2 ನೇ ಆರೋಪಿತನೂ ಕೂಡಾ ನಮ್ಮ ಮನೆಗೆ ಬಂದಿದ್ದನು.

ನನ್ನ ಗಂಡನ ಅಣ್ಣನ ಮಗಳು ನಾಗರತ್ನ ಪಾಂಡುರಂಗ ಅಗರವಾಡೇಕರ್ ಕೂಡಾ ಅವಳ ಉದ್ಯೋಗದ ನಿಮಿತ್ತ 1 ನೇ ಆರೋಪಿತಳು ಕೆಲಸಕೊಡಿಸುವ ಭರವಸೆ ನೀಡಿದ ಮೇರೆಗೆ ರೂ. 65 ಸಾವಿರವನ್ನು ಆಕೆಯ ತಾಯಿ ಆರೋಪಿತರಿಗೆ ಪಾವತಿಸಿದ್ದರು. ಆರೋಪಿತರು ಭರವಸೆ ನೀಡಿದ ಪ್ರಕಾರ ನನ್ನ ತಂಗಿಗಾಗಲೀ ಅಥವಾ ನನ್ನ ಭಾವನ ಮಗಳಿಗಾಗಲೀ ಕೆಲಸವನ್ನು ಕೊಡಿಸಿರುವುದಿಲ್ಲಾ ಮತ್ತು ನಾವು ನೀಡಿದ ಹಣ ಕೂಡಾ ಮರುಪಾವತಿಮಾಡಿರುವುದಿಲ್ಲಾ. ಆರೋಪಿತರು ಹಣವನ್ನು ಹಿಂತಿರುಗಿಸಬಹುದು ಎಂದು ಕಾದು ಅವರು ಕೊನೆಗೂ ಹಿಂತಿರುಗಿಸದೇ ಇರುವ ಕಾರಣ ನಾನು ದಿನಾಂಕಃ 25-12-2012 ರಂದು ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ಸಲ್ಲಿಸಿದ ದೂರನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ದೂರನ್ನು ನೀಡಿದ ನಂತರ ಪೊಲೀಸರು ನಮ್ಮ ಮನೆಯ ಬಳಿ ಬಂದು ಪಂಚನಾಮೆ ಕ್ರಮ ಜರುಗಿಸಿದ್ದರು ಆ ಸಂದರ್ಭದಲ್ಲಿ ಶ್ರೀಧರ ಮತ್ತು ರಾಘವೇಂದ್ರ ಎನ್ನುವವರು ಹಾಜರಿದ್ದರು. ಸಾಕ್ಷಿಯು ಗಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈ ಮೊದಲೇ ನಿಪಿ 1 ಎಂದು ಗುರುತಿಸಲಾಗಿದೆ. ತದನಂತರದಲ್ಲಿ ದಿಃ 26-12-2012 ರಂದು 1 ನೇ ಆರೋಪಿತಳ ಎನ್ ಟಿ ಸಿ ಕಾಲೇಜಿಗೆ ಪೋಲೀಸರು ಬೇಟಿ ನೀಡಿ ಅಲ್ಲಿ ಇನ್ನೊಂದು ಪಂಚನಾಮೆ ಕ್ರಮಜರುಗಿಸಿದ್ದರು. ಆ ಸಂದರ್ಭದಲ್ಲಿ ರಾಘವೇಂದ್ರ ಮತ್ತು ಇತರರು ಹಾಜರಿದ್ದರು. ಆ ಪಂಚನಾಮೆಯು ನ್ಯಾಯಾಲಯದ ಕಡತದಲ್ಲಿ ಕಂಡುಬರದೇ ಇರುವ ಕಾರಣ ಅದನ್ನು ಹುಡುಕಿ ನ್ಯಾಯಾಲಯದ ಕಡತದಲ್ಲಿ ಇರಿಸುವಂತೆ ಸಿಬ್ಬಂದಿಗೆ ಆದೇಶಿಸಲಾಯಿತು. ಆ ಕಾರಣದಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.